# *4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು*

**ಎಸ್‌ಸಿ. 34/2018**

| | | | |
|---|---|---|---|
| **ಸಾಕ್ಷಿದಾರರ ಹೆಸರು** | ಃ ಮುನವರ್ ಪಾಷ | | *ಪ್ರಮಾಣ ಮಾಡಿಸಿದ ದಿನಾಂಕಃ* |
| **ತಂದೆ ಹೆಸರು** | ಃ ಶೇಖ್ ಇಸ್ಮಾಯಿಲ್ | | **06.02.2020** |
| **ವಯಸ್ಸು** | ಃ 44 ವರ್ಷ | | |
| **ವೃತ್ತಿ** | ಃ ವ್ಯಾಪಾರ ಮತ್ತು ಆಟೋ ಚಾಲಕ | **ಪ್ರಾ.ಸಾ. ಃ** | **08** |
| **ವಾಸಸ್ಥಳ** | ಃ ಪಾಂಡವಪುರ ಟೌನ್, ಮಂಡ್ಯ ಜಿಲ್ಲೆ | **ಚಾ.ಸಾ. ಃ** | **21** |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

. ನಾನು ಪ್ಲಾಸ್ಟಿಕ್ ವ್ಯಾಪಾರ ಮಾಡುತ್ತೇನೆ ಹಾಗೂ ಆಟೋ ಚಾಲಕನ ಕೆಲಸ ಮಾಡುತ್ತೇನೆ. ಸಾಕ್ಷಿಯು ಅಮಾನತು ಮಹಜರ ಮೇಲೆ ಇರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ಅಮಾನತು ಮಹಜರನ್ನು ನಿ.ಪಿ.*10* ಎಂದು, ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿ.ಪಿ.*10(ಎ)* ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಉದಯಗಿರಿ ಪೊಲೀಸ್ ಠಾಣೆಯಲ್ಲಿ ಸುಮಾರು *2-3* ವರ್ಷಗಳ ಹಿಂದೆ ಪಂಚನಾಮೆಯ ಮೇಲೆ ಮಾಡಿರುತ್ತೇನೆ. ನಾನು ಆಟೋ ತೆಗೆದುಕೊಂಡು ಪಾಂಡವಪುರದಿಂದ ಮೈಸೂರಿಗೆ ಬಂದಾಗ ಆಟೋ ತೆಗೆದುಕೊಂಡು ಹೋಗುತ್ತಿದ್ದಾಗ ಉದಯಗಿರಿ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ನನಗೆ ಪಂಚನಾಮೆಗೆ ಸಹಿ ಮಾಡಿದ ಸಮಯ ಗೊತ್ತಿಲ್ಲ. ಯಾವ ಕಾರಣಕ್ಕೆ ಸಹಿ ಪಡೆಯುತ್ತಿದ್ದಾರೆ ಎಂದು ಪೊಲೀಸರು ನನಗೆ ಹೇಳಿಲ್ಲ. ಪಂಚನಾಮೆಯಲ್ಲಿ ಏನು ಬರೆದಿದ್ದಾರೆ ಎಂಬುದು ನನಗೆ ಗೊತ್ತಿಲ್ಲ. ಸ್ಕೂಟರ್ ನ ಬಿಡಿ ಭಾಗಗಳನ್ನು ನಾನು ಪೊಲೀಸರ ಮುಂದೆ ಹಾಜರುಪಡಿಸಿರುವುದಿಲ್ಲ. ನಾನು ಪಂಚನಾಮೆಗೆ ಸಹಿ ಮಾಡುವಾಗ ನ್ಯಾಯಾಲಯದ ಮುಂದೆ ಇರುವ ಯಾವುದೇ ಆರೋಪಿ ಹಾಜರಿರಲಿಲ್ಲ. ಈ ವಿಚಾರವಾಗಿ ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ.

***ಈ ಹಂತದಲ್ಲಿ, ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.***

***<u>ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-</u>***

.ದಿನಾಂಕ. **18.08.2016** ರಂದು ಬೆಳಗ್ಗೆ **10.30** ರಿಂದ **12.00** ಗಂಟೆಯ ಸಮಯದಲ್ಲಿ ಪಾಂಡವಪುರ ನಗರದ ನಮ್ಮ ಮನೆಯ ಹತ್ತಿರ ಆರೋಪಿ ಮಹಮ್ಮದ್ ಹನೀಫ್ ಮತ್ತು ಅಯೂಬ್ ಖಾನ್ ಇವರ ಸ್ವಇಚ್ಛಾ ಹೇಳಿಕೆಯ ಪ್ರಕಾರ ದ್ವಿಚಕ್ರ ವಾಹನದ ಬಿಡಿ ಭಾಗಗಳನ್ನು ನನಗೆ ಮಾರಾಟ ಮಾಡಿದ್ದರು. ಆರೋಪಿತರು ನನ್ನನ್ನು ತೋರಿಸಿ ದ್ವಿಚಕ್ರವಾಹನದ ಬಿಡಿ ಭಾಗಗಳನ್ನು ನನಗೆ ಮಾರಾಟ ಮಾಡಿದ್ದೇವೆ ಎಂದು ಹೇಳಿದರು ಎಂದು ಸೂಚಿಸುವುದು ಸರಿಯಲ್ಲ. ನಾನು ಹಾಜರುಪಡಿಸಿದ **3** ಪ್ಲಾಸ್ಟಿಕ್ ಚೀಲದಲ್ಲಿದ್ದ ದ್ವಿಚಕ್ರ ವಾಹನದ ಬಿಡಿ ಭಾಗಗಳು ಮತ್ತು **2** ಚಕ್ರಗಳು ಇವುಗಳನ್ನು ಪೊಲೀಸರು ಪಂಚನಾಮೆ ಮಾಡಿ ಅವುಗಳನ್ನು ನಿ.ಪಿ.**10** ಮಹಜರ ಪ್ರಕಾರ ಅಮಾನತುಪಡಿಸಿಕೊಂಡರು ಎಂದು ಸೂಚಿಸುವುದು ಸರಿಯಲ್ಲ. ಬರೆದ ಪಂಚನಾಮೆಗೆ ನಾನು ಸ್ಥಳದಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ವಾಹನಗಳ ಬಿಡಿ ಭಾಗಗಳನ್ನು ಆರೋಪಿಗಳಾದ ಮಹಮ್ಮದ್ ಹನೀಫ್ ಮತ್ತು ಅಯೂಬ್ ಖಾನ್ ಇವರಿಂದ ಖರೀದಿ ಮಾಡಿ ಮನೆಯಲ್ಲಿ ಇಟ್ಟುಕೊಂಡಿದ್ದೇನು ಎಂದು ಪೊಲೀಸರ ಮುಂದೆ ಹೇಳಿಕೆ ನೀಡಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ. ನನಗೆ ಬಿಡಿ ಭಾಗಗಳನ್ನು ಮಾರಾಟ ಮಾಡಿದ **3** ಮತ್ತು **5** ನೇ ಆರೋಪಿತರು ಇದ್ದಾರೆ ಎಂದರೆ ಸರಿಯಲ್ಲ. ಹೇಳಿಕೆಯನ್ನು ನಿ.ಪಿ.**11** ಎಂದು ಗುರುತಿಲಾಯಿತು. ವಾಹನದ ಬಿಡಿ ಭಾಗಗಳನ್ನು ಆರೋಪಿತರಿಂದ ಖರೀದಿ ಮಾಡಿದ್ದರು ಸಹ ಆರೋಪಿಗಳಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು ಃ ಆರೋಪಿತರ ಪರ ವಕೀಲರಿಂದಃ-</u>

. ಪಾಟೀ ಸವಾಲು ಇಲ್ಲ ಎಂದು ಹೇಳಿದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

***ಮರು ವಿಚಾರಣೆಃ- ಇಲ್ಲ.***

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
*ಮೈಸೂರು*